ಮುಜರಾಯಿ ಇಲಾಖೆ ವ್ಯಾಪ್ತಿಗೆ ದೇವಾಲಯಗಳ ಸೇರ್ಪಡೆ

2057 (3087) ಶ್ರೀ ಬಸವರಾಜ ಹೆಚ್.ಡಿ. (ವಿರಾಜಪೇಟೆ):- ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ ಸಂಖ್ಯೆ ಎಷ್ಟು ಹಾಗೂ ಇವುಗಳಿಂದ ಬರುವ ಆದಾಯ ಎಷ್ಟು ಮತ್ತು ಇವುಗಳ ನಿರ್ವಹಣೆಗೆ ಖರ್ಚಾಗುವ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ಇಂತಹ ದೇವಾಲಯಗಳು ಕೊಡಗು ಜಿಲ್ಲೆಯಲ್ಲಿ ಎಷ್ಟಿವೆ ಹಾಗೂ ಇವುಗಳ ನಿರ್ವಹಣೆಗೆ ಖರ್ಚಾದ ಹಣ ಎಷ್ಟು;

ಇ) ಮುಜರಾಯಿ ಹೊರತುಪಡಿಸಿ ಉಳಿದ ದೇವಾಲಯಗಳ ಜೀರ್ಣೋದ್ಧಾರಕ್ಕೆ ಕೈಗೊಂಡ ಕ್ರಮಗಳೇನು (ಕೊಡಗು ಜಿಲ್ಲೆಯ ತಾಲ್ಲೂಕುವಾರು ಬವಿವರ ನೀಡುವುದು);

ಈ) ಮುಜರಾಯಿ ಇಲಾಖೆ ವ್ಯಾಪ್ತಿಗೊಳಪಡದ ದೇವಾಲಯ (ಪ್ರಮುಖವಾದವು)ಗಳು ಎಷ್ಟು;

ಉ) ಇವುಗಳನ್ನು ಮುಜರಾಯಿ ವ್ಯಾಪ್ತಿಗೆ ಒಳಪಡಿಸಿಕೊಳ್ಳಲು ಸರ್ಕಾರ ಪರಿಗಣಿಸಿದೆಯೇ ಅಂತಹ ದೇವಾಲಯಗಳು ಯಾವುವು (ವಿವರ ಒದಗಿಸುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಧಾರ್ಮಿಕ ಮತ್ತು ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಗೆ 34,211 ಅಧಿಸೂಚಿತ ಸಂಸ್ಥೆಗಳು ಒಡಪಡುತ್ತವೆ.

ಈ ದೇವಾಲಯಗಳಿಂದ ಬರುವ ಆದಾಯವನ್ನು ಆಯಾಯ ದೇವಾಲಯಗಳ ನಿರ್ವಹಣೆಗೆ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸಲಾಗುತ್ತದೆ.

ಆ) ಕೊಡಗು ಜಿಲ್ಲೆಯಲ್ಲಿ ಈ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವ 7 ಅಧಿಸೂಚಿತ ಸಂಸ್ಥೆಗಳು (ದೇವಾಲಯಗಳು) ಬರುತ್ತವೆ. ಈ ದೇವಾಲಯಗಳಿಂದ ಬರುವ ಆದಾಯವನ್ನು ಆಯಾಯ ದೇವಾಲಯಗಳ ನಿರ್ವಹಣೆಗೆ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಲಾಗುತ್ತದೆ. 2 ವರ್ಷದ ಆದಾಯ ವೆಚ್ಚದ ವಿವರ ಈ ಕೆಳಕಂಡಂತೆ ಇರುತ್ತದೆ:-

ವರ್ಷ	ಆದಾಯ	ವೆಚ್ಚ
2003-2004	32,93,854-00	28,84,499-00
2004-2005	36,45,215-00	30,87,141-00

ಇ) ಇಲಾಖೆಯ ವ್ಯಾಪ್ತಿಗೆ ಬರುವ ದೇವಾಲಯಗಳನ್ನು ಒಳಗೊಂಡಂತೆ ಇತರೇ ಧಾರ್ಮಿಕ ಸಂಸ್ಥೆಗಳ ಜೀರ್ಣೋದ್ಧಾರ/ದುರಸ್ತಿಗಾಗಿ ಅನುದಾನ ಕೋರಿ ನಿಯಮಾನುಸಾರ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ.

ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿನ ಧಾರ್ಮಿಕ ಸಂಸ್ಥೆಗಳ ದುರಸ್ತಿ/ಜೀರ್ಣೋದ್ಧಾರಕ್ಕಾಗಿ ಸರ್ಕಾರದಿಂದ ಮಂಜೂರಾದ ಅನುದಾನದ ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

ಸಾಮಾನ್ಯ ಅನುದಾನದ ಅಡಿ						
ತಾಲ್ಲೂಕು ಹೆಸರು	2002–2003		2003–2004		2004–2005	
	ಸಂಸ್ಥೆಗಳ ಸಂಖ್ಯೆ	ಮೊಬಲಗು	ಸಂಸ್ಥೆಗಳ ಸಂಖ್ಯೆ	ಮೊಬಲಗು	ಸಂಸ್ಥೆಗಳ ಸಂಖ್ಯೆ	ಮೊಬಲಗು
ಮಡಿಕೇರಿ	20	1,09,000	22	18,65,000	2	1,00,000
ವಿರಾಜಪೇಟೆ	42	14,30,000	43	13,20,000	1	1,00,000
ಸೋಮವಾರ ಪೇಟೆ	7	3,45,000	17	4,20,000	2	1,50,000
ಒಟ್ಟು	**69**	**1,26,75,000**	**82**	**36,05,000**	**5**	**3,50,000**
ಆರಾಧನಾ ಯೋಜನೆಯಡಿ ಅನುದಾನ						
ಮಡಿಕೇರಿ	–	2,05,356	–	53,571	–	2,82,000
ವಿರಾಜಪೇಟೆ	–	2,05,356	–	53,571	–	2,82,000
ಸೋಮವಾರ ಪೇಟೆ	–	2,05,356	–	53,571	–	2,82,000
ಒಟ್ಟು		**6,16,068**		**1,60,713**		**846000**

ಈ) ಕೊಡಗು ಜಿಲ್ಲೆಯಲ್ಲಿ ಈ ಇಲಾಖೆಯಲ್ಲಿ ವ್ಯಾಪ್ತಿಗೆ ಬರುವ ಪ್ರಮುಖ ದೇವಾಲಯಗಳು ಆಡಳಿತ ವ್ಯಾಪ್ತಿಗೆ ಬಾರದೇ ಇರುವುದರಿಂದ, ಅವುಗಳ ವಿವರ ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ಉ) ಈ ಇಲಾಖೆಯ ಆಡಳಿತ ವ್ಯಾಪ್ತಿಗೆ ಬಾರದಿರುವ ದೇವಾಲಯಗಳ ಬಗ್ಗೆ ದೂರುಗಳು ಬಂದಲ್ಲಿ ನೂತನ ಕಾಯಿದೆಯ ಸೆಕ್ಷನ್ 42,43 ರಲ್ಲಿ ಅವಕಾಶ ಇರುವುದರಿಂದ, ಸದರೀ ಕಾಯಿದೆ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

2059 (2607) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಅಭಾವದಿಂದ ಆಗಾಗ್ಗೆ ವಿದ್ಯುತ್ ಕಡಿತ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;